**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೭.೧೦.೨೦೧೨ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೫ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೫ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಕ್ಟೋಬರ್ ೧೭, ೨೦೧೨ರ ಬುಧವಾರದಂದು ಮಧ್ಯಾಹ್ನ ೦೨.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಎಚ್.ಟಿ. ತಳವಾರ್,** ಉಪ ನಿರ್ದೇಶಕರು<br>ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೩. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ | ಸದಸ್ಯರು |
| ೪. | **ವಿದ್ವಾನ್ ಚಂದ್ರಶೇಖರಯ್ಯ,** ರಾಮನಗರ | ಸದಸ್ಯರು |
| ೫. | **ಡಾ. ಪದ್ಮಾಶೇಖರ್,** ಮೈಸೂರು | ಸದಸ್ಯರು |
| ೬. | **ಡಾ. ಸಿ. ಪಾಲಯ್ಯ,** ಚಿತ್ರದುರ್ಗ | ಸದಸ್ಯರು |
| ೭. | **ಡಾ. ಭಗವಂತ ಲಕ್ಷ್ಮಣ ನಡೋಣಿ,** ಧಾರವಾಡ | ಸದಸ್ಯರು |
| ೮. | **ವಿದ್ವಾನ್ ಶ್ರೀನಿವಾಸಮೂರ್ತಿ,** ಮೈಸೂರು | ಸದಸ್ಯರು |
| ೯. | **ಪ್ರೊ. ಸಿ. ನಂಜುಂಡಯ್ಯ,** ಆದಿಚುಂಚನಗಿರಿ | ಸದಸ್ಯರು |
| ೧೦. | **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ,** ತುಮಕೂರು | ಸದಸ್ಯರು |
| ೧೧. | **ಡಾ. ಎಚ್.ಕೆ. ಸುರೇಶ್ ಆಚಾರ್ಯ,** ಉಡುಪಿ | ಸದಸ್ಯರು |
| ೧೨. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೩. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಸರ್ಕಾರದ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಸರ್ಕಾರದ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಡಾ. ಬಿ.ಎಸ್. ಮಹದೇವಯ್ಯ,** ಶಿವಮೊಗ್ಗ | ಸದಸ್ಯರು |
| ೬. | **ಪ್ರೊ. ಬಿ. ಮಹಾದೇವನ್,** ಬೆಂಗಳೂರು | ಸದಸ್ಯರು |
| ೭. | **ವಿದ್ವಾನ್ ಎ. ಹರಿದಾಸ ಭಟ್ಟ,** ಬೆಂಗಳೂರು | ಸದಸ್ಯರು |
| ೮. | **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ,** ಹೊನ್ನಾವರ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿ, ಈ ಸಂದರ್ಭದಲ್ಲಿ ಸರ್ಕಾರದಿಂದ ನಾಮಕರಣಗೊಂಡ ನೂತನ ಸದಸ್ಯರನ್ನು ವಿಶ್ವವಿದ್ಯಾಲಯದ ಪರವಾಗಿ ಸತ್ಕರಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಿಕ್ಷಣ ಪರಿಷತ್ ನಾಲ್ಕನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 30.06.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ನಾಲ್ಕನೇ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 3ಕ್ಕೆ** ಸಂಬಂಧಿಸಿದಂತೆ ಪ್ರಶಾಸನ ಸಮಿತಿ 6ನೇ ಸಭೆಯಲ್ಲಿ ಮಂಡಿಸಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಮುಂದಿನ ಕ್ರಮಕೈಗೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 4ಕ್ಕೆ** ಸಂಬಂಧಿಸಿದಂತೆ ಯೋಜನೆಗೆ ತಗಲುವ ವೆಚ್ಚವನ್ನು 2013–14ನೇ ಶೈಕ್ಷಣಿಕ ವರ್ಷದ ಸರ್ಕಾರಿ ಆಯ–ವ್ಯಯದಲ್ಲಿ ಸೂಕ್ತ ಪ್ರಸ್ತಾವನೆಯನ್ನು ಮಂಡಿಸುವಂತೆ ಪ್ರಶಾಸನ ಸಮಿತಿ 6ನೇ ಸಭೆಯಲ್ಲಿ ನಿರ್ಣಯಿಸಲಾಗಿದ್ದು ಅದರಂತೆ ಕ್ರಮಕೈಗೊಳ್ಳಲಾಗಿದೆ. **ವಿಷಯ ಸಂಖ್ಯೆ 6, 7, 8 ಮತ್ತು 9ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 10ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಿ 2012–13ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದೆ. **ವಿಷಯ ಸಂಖ್ಯೆ 11ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಿ ಪ್ರಶಾಸನ ಸಮಿತಿ 6ನೇ

ಸಭೆಯಲ್ಲಿ ಮಂಡಿಸಲಾಗಿದ್ದು, 2013–14ನೇ ಸಾಲಿನಿಂದ ಜಾರಿಗೆ ತರಲು ಕ್ರಮಕೈಗೊಳ್ಳಲಾಗಿದೆ. **ವಿಷಯ ಸಂಖ್ಯೆ 13ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ 5 ಮತ್ತು 8ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಪರಿಶೀಲಿಸಿ ಒಪ್ಪಿಗೆಯನ್ನು ನೀಡಿತು.**

**ವಿಷಯ 2: 'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ 2012'ರ ಪರಿಶೀಲನೆ ಮತ್ತು ಅನುಮೋದನೆ ಬಗೆಗೆ.**

ಟಿಪ್ಪಣಿ: ಮಾನ್ಯ ಕುಲಪತಿಗಳ ಆದೇಶದಂತೆ ತಜ್ಞರ ಸಮಿತಿಯೊಂದು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು ರಚಿಸಿ ಕರಡನ್ನು ಸಿದ್ಧಪಡಿಸಿದೆ. ಆ ಕರಡನ್ನು ಪ್ರಶಾಸನ ಸಮಿತಿಯ ಹಾಗೂ ಪ್ರಶಿಕ್ಷಣ ಪರಿಷತ್ತಿನ ಸದಸ್ಯರನ್ನೊಳಗೊಂಡ ಉಪಸಮಿತಿಯು ಈಗಾಗಲೇ ಪರಿಶೀಲಿಸಿ ನೀಡಿದೆ. ಈ ಪರಿನಿಯಮವನ್ನು ಅನುಮೋದನೆಗಾಗಿ ಸಭೆಯ ಮುಂದೆ ಸಲ್ಲಿಸಿದೆ.

ನಿರ್ಣಯ: **ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 3: ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಸಂದರ್ಶನಕ್ಕೆ ಸಂಬಂಧಿಸಿದ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು, ಉಪ ಗ್ರಂಥಪಾಲಕರು ಮತ್ತು ಸಹಾಯಕ ಗ್ರಂಥಪಾಲಕರ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನ ನಿಯಮಾವಳಿಯನ್ನು ಸಿದ್ಧಪಡಿಸಲಾಗಿದ್ದು, ಈ ಪರಿನಿಯಮವನ್ನು ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸಭೆಯು ವಿಷಯವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 4: ಶತಾವಧಾನಿ ಡಾ. ಆರ್. ಗಣೇಶ್ ಅವರನ್ನು ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಸೂಚನೆಯ ಪ್ರಕರಣ 13–4(ಎ)ರಲ್ಲಿ ದತ್ತವಾದ ಅಧಿಕಾರದಂತೆ ಮತ್ತು ಅಂಶ 7ರಲ್ಲಿ ನಿಹಿತವಾದ ಅಧಿಕಾರದಂತೆ ಹಾಗೂ ಅಧ್ಯಾಯ 10ರ 69ನೇ ಪ್ರಕರಣದ 5ನೇ ಅಂಶದಲ್ಲಿನ ಅಧಿಕಾರ ಹಾಗೂ ಕರ್ತವ್ಯಗಳ ಅನ್ವಯ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಅಂತಾರಾಷ್ಟ್ರೀಯ ಸ್ತರದ ಪ್ರಾಧ್ಯಾಪಕರೂ ಕನ್ನಡ–ಸಂಸ್ಕೃತ ಭಾಷಾತಜ್ಞರೂ ಆದ ಡಾ. ಎಚ್.ವಿ. ನಾಗರಾಜರಾವ್ ಅವರನ್ನು ಪ್ರತಿ ತಿಂಗಳು ಕಾಲೇಜುಗಳಲ್ಲಿ ವಿಶೇಷೋಪನ್ಯಾಸ ನೀಡುವುದು ಮತ್ತು ವಿಶೇಷ ಅನುವಾದ ಯೋಜನೆಯೊಂದನ್ನು ಪೂರೈಸುವಿಕೆಗೆ ಒಳಪಟ್ಟು ಒಂದು ವರ್ಷದ ಅವಧಿಗೆ ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಗಿತ್ತು. ಅವರಿಗೆ ಪ್ರತೀ ತಿಂಗಳು ರೂ. 15,000/–ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುತ್ತಿದೆ. ಗೌರವ ಸಂದರ್ಶಕ ಪ್ರಾಧ್ಯಾಪಕರ ನೇಮಕಕ್ಕೆ ಸಂಬಂಧಿಸಿದಂತೆ ದಿನಾಂಕ: 2011ರ ಡಿಸೆಂಬರ್ 5ರಂದು ನಡೆದ ಪ್ರಶಾಸನ ಸಮಿತಿ ಮೊದಲ ಸಭೆಯ ವಿಷಯ ಸಂಖ್ಯೆ 8ರಲ್ಲಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿತ್ತು. ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರ ಅವಧಿಯು ಆಗಸ್ಟ್ 31.08.2012ಕ್ಕೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಸ್ತರದ ವಿದ್ವಾಂಸರೂ ಕನ್ನಡ–ಸಂಸ್ಕೃತ ಭಾಷಾತಜ್ಞರೂ ಆದ ಶತಾವಧಾನಿ ಡಾ. ಆರ್. ಗಣೇಶ್ ಅವರನ್ನು ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಿಕೊಳ್ಳಲಾಗಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 5: ಪ್ರೊ. ಕೆ.ಎಸ್. ಕಣ್ಣನ್ ಅವರು ನಿಯೋಜನೆಯ ಮೇರೆಗೆ ವಿಶ್ವವಿದ್ಯಾಲಯದ ಸೇವೆಗೆ ಹಾಜರಾಗಿರುವ ಬಗೆಗೆ.**

ಟಿಪ್ಪಣಿ: ಪ್ರೊ. ಕೆ.ಎಸ್. ಕಣ್ಣನ್, ಸಂಸ್ಕೃತ ಉಪಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು, ಗೌರಿಬಿದನೂರು –ಇವರನ್ನು ಸರ್ಕಾರದ ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 299 ಯುಆರ್‌ಸಿ 2012, ದಿನಾಂಕ: 21.08.2012ರ ನಿರ್ದೇಶನದಂತೆ ಅನ್ಯಕಾರ್ಯನಿಮಿತ್ತ ಒಂದು ವರ್ಷದ ಅವಧಿಗೆ ಕಾರ್ಯನಿರ್ವಹಿಸಲು ಆದೇಶಿಸಿದೆ. ಇದರನ್ವಯ ಮಾನ್ಯರು ತಮ್ಮ ಮೂಲ ಹುದ್ದೆಯಿಂದ ಬಿಡುಗಡೆಗೊಂಡು ವಿಶ್ವವಿದ್ಯಾಲಯಕ್ಕೆ ದಿನಾಂಕ: 23.08.2012ರ ಪೂರ್ವಾಹ್ನ ವರದಿ ಮಾಡಿಕೊಂಡಿದ್ದು, ಇವರನ್ನು 'ಅಭಿಲಷಿತಾರ್ಥ ಚಿಂತಾಮಣಿ ವಿಶ್ವಕೋಶ' ಯೋಜನೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಸಂತೋಷವನ್ನು ವ್ಯಕ್ತಪಡಿಸಿ, ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 6: ರಾಜ್ಯದಲ್ಲಿನ ಸಂಸ್ಕೃತ ಕಾಲೇಜುಗಳಲ್ಲಿ ಸಂಯುಕ್ತಗೊಂಡ ಸಂಸ್ಕೃತ ಪಾಠಶಾಲೆಗಳ ಪ್ರತ್ಯೇಕ ಕಾರ್ಯನಿರ್ವಹಣೆಯ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನಲ್ಲಿ ರಾಜ್ಯದ ನಾಲ್ಕು ವಲಯಗಳ ಸಂಸ್ಕೃತ ಪಾಠಶಾಲೆಗಳ ಮುಖ್ಯೋಪಾಧ್ಯಾಯರ ಹಾಗೂ ಆಡಳಿತ ಮಂಡಳಿಗಳ ಕಾರ್ಯದರ್ಶಿಗಳು/ಅಧ್ಯಕ್ಷರ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಸ್ಕೃತ ಕಾಲೇಜುಗಳಲ್ಲಿ ಪ್ರಥಮಾ ತರಗತಿಯಿಂದ ಸಾಹಿತ್ಯದ ತರಗತಿಗಳವರೆಗೂ ಬೋಧನೆ ನಡೆಯುತ್ತಿದ್ದು, ಸಂಸ್ಕೃತ ಪಾಠಶಾಲೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಕಾಲೇಜುಗಳಿಂದ ಪ್ರತ್ಯೇಕಪಡಿಸಬೇಕಾದ ಅವಶ್ಯಕತೆ ಇರುತ್ತದೆ. ಈ ಕುರಿತು ಕೆಲ ಕಾಲೇಜುಗಳ ಪ್ರಾಚಾರ್ಯರುಗಳು ಒಪ್ಪಿಗೆ ಪತ್ರಗಳನ್ನು ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಕಾಲೇಜುಗಳ ಪಾಠಶಾಲೆಗಳಿಗೆ 2012–13ನೇ ಸಾಲಿನಿಂದ ಪ್ರತ್ಯೇಕವಾಗಿ ಮಾನ್ಯತೆಯನ್ನು ನೀಡಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿತು. ಅನಂತರ ಪ್ರತ್ಯೇಕ ಕಾರ್ಯನಿರ್ವಹಣೆಗೆ ಅನುಮೋದನೆಯನ್ನು ನೀಡಿತು.**

**ವಿಷಯ 7: ಹೊಸದಾಗಿ ಪ್ರಾರಂಭಿಸುವ ಸಂಸ್ಕೃತ ಪಾಠಶಾಲೆಗಳ ಸ್ಥಿರನಿಧಿ ಠೇವಣಿ ಹಣವನ್ನು 2000 ರೂ.ಗಳಿಂದ 5000 ರೂ.ಗಳಿಗೆ ಹೆಚ್ಚಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರವು ಈ ಹಿಂದೆ ಸಂಸ್ಕೃತ ಪಾಠಶಾಲೆಗಳನ್ನು ಹೊಸದಾಗಿ ತೆರೆಯಲು ಅನುಮತಿ ನೀಡುವ ಮುನ್ನ ರೂ. 2000–00 ಗಳನ್ನು ಕರ್ನಾಟಕ ಸರ್ಕಾರದ ಸಂಸ್ಕೃತ ಪಾಠಶಾಲೆಗಳ ಅನುದಾನಸಂಹಿತೆಯ ನಿಯಮದಂತೆ ಪಾಠಶಾಲೆಗಳ ಆಡಳಿತ ಮಂಡಳಿಗಳ ಹೆಸರಿನಲ್ಲಿ ಸ್ಥಿರನಿಧಿ ಠೇವಣಿಯನ್ನಾಗಿ ಇಡಲು ಸೂಚಿಸಿ, ಆನಂತರದಲ್ಲಿ ಮಾನ್ಯತೆಯನ್ನು ನೀಡುತ್ತಿತ್ತು. ಪ್ರಸಕ್ತ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಹೊಸದಾಗಿ ಪ್ರಾರಂಭಿಸುವ ಸಂಸ್ಕೃತ ಪಾಠಶಾಲೆಗಳಿಗೆ ಅನುಮತಿ ನೀಡಿ, ಆನಂತರ ಮಾನ್ಯತೆಯನ್ನು ನೀಡುತ್ತಿದ್ದು, ಈ ಸಂಬಂಧ ನೂತನವಾಗಿ ಪ್ರಾರಂಭಿಸಲಾಗುವ ಸಂಸ್ಕೃತ ಪಾಠಶಾಲೆಗಳ ಹೆಸರಿನಲ್ಲಿ ರೂ. 5000–00 ಗಳನ್ನು ಸ್ಥಿರನಿಧಿ ಠೇವಣಿಯನ್ನಾಗಿ ಇಡಲು ಸೂಚಿಸಿದೆ. ಈ ವಿಷಯವನ್ನು ಸಭೆಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 5000/– ರೂ.ಗಳ ಸ್ಥಿರನಿಧಿಯನ್ನು ಠೇವಣಿಯನ್ನಾಗಿ ಇಡಲು ಅನುಮೋದನೆಯನ್ನು ನೀಡಿತು.**

**ವಿಷಯ 8: ಪ್ರಥಮ ದೀಕ್ಷಾಂತ ಘಟಿಕೋತ್ಸವವನ್ನು ನವೆಂಬರ್ ಮೊದಲ ವಾರದಲ್ಲಿ ರಾಜಭವನದ ಗಾಜಿನಮನೆಯಲ್ಲಿ ಆಚರಿಸುವ ಬಗೆಗೆ.**

ಟಿಪ್ಪಣಿ: ಘನತೆವೆತ್ತ ರಾಜ್ಯಪಾಲರು ನವೆಂಬರ್ ಮೊದಲ ವಾರದಲ್ಲಿ ಘಟಿಕೋತ್ಸವ ನಡೆಸಲು ಒಪ್ಪಿರುತ್ತಾರೆ. ಆ ದಿನ 2010–11ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದವರಿಗೆ 5000/– ನಗದು, ಪ್ರಮಾಣಪತ್ರ, ಶಲ್ಯ ನೀಡುವುದು. ಬಿ.ಎ. ವಿದ್ವನ್ಮಧ್ಯಮಾ ಪದವಿ ಪಡೆದ ವಿದ್ಯಾರ್ಥಿಗಳಿಗೂ ಎಂ.ಎ. ವಿದ್ವದುತ್ತಮಾ ಪದವಿ ಪಡೆದ ವಿದ್ಯಾರ್ಥಿಗಳಿಗೂ ಘಟಿಕೋತ್ಸವ ಪ್ರಮಾಣಪತ್ರ ನೀಡಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 9: ಶೃತಿ ಶಂಕರ ಸಂಸ್ಕೃತ ಸಂಶೋಧನ ಪ್ರತಿಷ್ಠಾನಂ, ಮತ್ತೂರು, ಶಿವಮೊಗ್ಗ ಜಿಲ್ಲೆ –ಇಲ್ಲಿಗೆ ಮಾನ್ಯತೆ ನೀಡುವ ಬಗೆಗೆ.**

ಟಿಪ್ಪಣಿ: ದಿನಾಂಕ: 25.08.2012ರಂದು ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಪ್ರಶಾಸನ ಸಮಿತಿ ಸದಸ್ಯರು –ಇವರ ಅಧ್ಯಕ್ಷತೆಯ ಸಮಿತಿಯು ಸದರಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಗೆ ಮಾನ್ಯತೆಯನ್ನು ನೀಡಬೇಕಾಗಿದೆ. ಸಭೆಯ ಒಪ್ಪಿಗೆಗಾಗಿ ತ್ರಿಸದಸ್ಯ ಸಮಿತಿಯ ವರದಿಯನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 10: ಇಂಡೋ–ಯೂರೋಪೀಯ ಶೈಕ್ಷಣಿಕ ಯೋಜನೆಯನ್ನು ಆರಂಭಿಸುವುದರ ಬಗೆಗೆ.**

ಟಿಪ್ಪಣಿ: ಭಾರತಕ್ಕೆ 'ಯೂರೋಪೀಯ ಒಕ್ಕೂಟ'ದ ಪ್ರಾತಿನಿಧಿಕವು (Delegation of European Union to India) ಪ್ರಸ್ತಾವಗಳನ್ನು (proposals) ಸಲ್ಲಿಸಲು ಕರೆ ನೀಡಿದೆ. ಶೈಕ್ಷಣಿಕ ಪುರೋಭಿವೃದ್ಧಿಯ ದೃಷ್ಟಿಯಿಂದಲೂ ಸಾಂಸ್ಕೃತಿಕ ಕ್ರಿಯಾವಿನಿಮಯದ ದೃಷ್ಟಿಯಿಂದಲೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಇದೊಂದು ಸದವಕಾಶವೇ ಆಗಿದೆ. ಆರ್ಥಿಕ ಸಹಾಯವು ಮೇಲಿನ ಅನುದಾನದಿಂದ ಬರುವುದಾಗಿದ್ದು, ಹಲವು ಉಪಯುಕ್ತ ಯೋಜನೆಗಳನ್ನು ವಿಶ್ವವಿದ್ಯಾಲಯವು ಕೈಗೆತ್ತಿಕೊಳ್ಳಬಹುದಾಗಿದೆ. ಅಂತೆಯೇ, ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸಂಖ್ಯೆಯ ವಿಚಾರಸಂಕಿರಣಗಳನ್ನು ನಡೆಸುವುದೂ ಉದ್ಗ್ರಂಥಗಳ ಪ್ರಕಾಶನವನ್ನು ಕೈಗೆತ್ತಿಕೊಳ್ಳುವುದೂ ವಿಶ್ವವಿದ್ಯಾಲಯಕ್ಕೆ ಇನ್ನೂ ಸುಕರವಾಗುತ್ತದೆ. ಅಲ್ಲದೆ, ಬಹುಶಾಸ್ತ್ರೀಯ ಅಧ್ಯಯನಕ್ಕೂ (multi-disciplinary studies) ಈ ಅಂತಾರಾಷ್ಟ್ರೀಯ ಸಹಕಾರವು ಒಂದು ಒಳ್ಳೆಯ ವೇದಿಕೆಯನ್ನು ಕೊಡಬಲ್ಲುದು. ಯೂರೋಪೀಯ ಒಕ್ಕೂಟವೇ ಶೇಕಡಾ 90%ರಷ್ಟು ಅನುದಾನವನ್ನು ಕೊಡುವುದಾಗಿದ್ದು, ವಿಶ್ವವಿದ್ಯಾಲಯವು ಕೇವಲ ಶೇಕಡಾ 10%ರಷ್ಟು ಮಾತ್ರ ಧನವನ್ನು ಒದಗಿಸಬೇಕಾಗುತ್ತದೆ. ಈ ಕಾರ್ಯಕ್ರಮವು ಸುನಿರ್ವಹಣೀಯವೂ ಆಗಿರುತ್ತದೆ. ಸಾಧನ ಸೌಲಭ್ಯ(infrastructure)ಗಳ ಪರಿಷ್ಕರಣವೆಂಬುದೂ ಇದರಿಂದ ಆನುಷಂಗಿಕವಾಗಿ (as a by product) ಸಂಪನ್ನವಾಗುತ್ತದೆ. ಅಂತಾರಾಷ್ಟ್ರೀಯ ಸಂಬಂಧಗಳನ್ನು ವರ್ಧಿಸುವ ನಿಟ್ಟಿನಲ್ಲಿ ಈ

ಕಾರ್ಯಕ್ರಮವು ಒಂದು ಸಕಾರಾತ್ಮಕವಾದ ಪಾತ್ರವನ್ನು ಹೊಂದಿದೆ. ಪ್ರಕೃತ, ಭಾರತ ಹಾಗೂ ಯೂರೋಪುಗಳ ನಡುವಣ ಸಂಬಂಧಕ್ಕೆ ಇದು ಪೋಷಕವಾಗಿದೆ. ಉದ್ದಿಷ್ಟ ಕಾರ್ಯಕ್ರಮವು ವಿಶ್ವವಿದ್ಯಾಲಯದ ಚಟುವಟಿಕೆಗಳ ವಿಸ್ತರಣಕ್ಕೆ ಅತ್ಯಂತ ಸಹಕಾರಿಯಾಗಿದೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 11: 1985 ರಿಂದ 2000ರವರೆಗಿನ ಅನುದಾನ ರಹಿತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗೆಗೆ.**

ಟಿಪ್ಪಣಿ: 1985 ರಿಂದ 2000ರವರೆಗಿನ 55 ಅನುದಾನ ರಹಿತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರಸ್ತುತ ವರ್ಷದಲ್ಲಿ ಹೊಸ ಸಂಸ್ಕೃತ ಪಾಠಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅನುದಾನವನ್ನು ನಿಗದಿಪಡಿಸಿರುವುದಿಲ್ಲ ಅಲ್ಲದೇ ಉನ್ನತ ಶಿಕ್ಷಣ ಇಲಾಖೆಗೆ ಮುಂದುವರೆದ ಕಾಮಗಾರಿಗಳಿಗಾಗಿಯೇ ಅನುದಾನದ ಕೊರತೆ ಇದ್ದು, ಇಂತಹ ಸಂದರ್ಭದಲ್ಲಿ ಆಯವ್ಯಯ ನಿಗದಿಪಡಿಸಿದ ಈ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗದು ಮತ್ತು ಮಿತವ್ಯಯ ಆದೇ ಇನ್ನೂ ಜಾರಿಯಲ್ಲಿರುವುದರಿಂದ ಹೊಸದಾಗಿ ಖಾಸಗಿ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 647 ವೆಚ್ಚ–8 2012 ದಿನಾಂಕ: 21.08.2012ರನ್ವಯ ಒಪ್ಪಲು ಸಾಧ್ಯವಿಲ್ಲವೆಂದು ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ರವರು ದಿನಾಂಕ: 17.09.2012ರ ಪತ್ರದಲ್ಲಿ ನಿರ್ದೇಶಿಸಿರುತ್ತಾರೆ.

ಆದರೆ ಈಗಾಗಲೇ ಸರ್ಕಾರ 1994–95ರ ಪೂರ್ವದಲ್ಲಿ ಪ್ರಾರಂಭವಾಗಿ ಅವಿಚ್ಛಿನ್ನವಾಗಿ ನಡೆದುಕೊಂಡು ಬರುತ್ತಿರುವ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಆದೇಶಿಸಿರುತ್ತದೆ. ಅದರಂತೆ ಅನುದಾನ ರಹಿತ ಸಂಸ್ಕೃತ ಶಾಲೆಗಳನ್ನು ಸಹ ಅನುದಾನಕ್ಕೆ ಒಳಪಡಿಸಲು ಸರ್ಕಾರಕ್ಕೆ ಪುನರ್ ಮನವಿ ಸಲ್ಲಿಸುವ ಸಂಬಂಧ ಸಭೆಯ ಅವಗಾಹನೆಗೆ ಕಡತ ಮಂಡಿಸಿದೆ.

ನಿರ್ಣಯ: **ಸಭೆಯು ಒಮ್ಮೆ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಈ ಬಗೆಗೆ ಹಕ್ಕೊತ್ತಾಯ ಮಾಡಬೇಕೆಂದೂ ಉನ್ನತ ಶಿಕ್ಷಣ ಸಚಿವರಲ್ಲಿಯೂ ನಿವೇದನೆ ಮಾಡಿಕೊಳ್ಳಬೇಕೆಂದೂ ಅಭಿಪ್ರಾಯಪಟ್ಟು ಅನುಮೋದನೆಯನ್ನು ನೀಡಿತು.**

**ವಿಷಯ 12: 2012–2013ನೇ ಸಾಲಿನಲ್ಲಿ ನಡೆಯುವ ಸಂಸ್ಕೃತ, ವೇದ ಮತ್ತು ಜೈನ ತರಗತಿಗಳ ಪ್ರಸಿದ್ಧ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

ಟಿಪ್ಪಣಿ: 2012–2013ನೇ ಸಾಲಿನಲ್ಲಿ ನಡೆಯುವ ಸಂಸ್ಕೃತ, ವೇದ ಮತ್ತು ಜೈನ ತರಗತಿಗಳ ಪ್ರಸಿದ್ಧ ಪರೀಕ್ಷೆಗಳಿಗೆ ಖಾಸಗಿ ಹಾಗೂ ಶಾಲಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ಅಧಿಸೂಚನೆಯನ್ನು ಸಿದ್ಧಪಡಿಸಲಾಗಿದೆ. ಪ್ರಥಮಾ ಮತ್ತು ಕಾವ್ಯ ತರಗತಿಗಳ ಪರೀಕ್ಷೆಗಳನ್ನು ಜನವರಿ 2013ರ 19, 20, 21ರಂದು ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳನ್ನು ಒಟ್ಟಿಗೆ ನಡೆಸಲು ಅನುಮೋದನೆಯನ್ನು ನೀಡಿತು.**

**ವಿಷಯ 13: ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ.**

ಟಿಪ್ಪಣಿ: 2013–14ನೇ ವರ್ಷಕ್ಕೆ ಹೊಸದಾಗಿ ಪಠ್ಯಪುಸ್ತಕ ಪರಿಷ್ಕರಣೆಗಾಗಿ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

**2012–13 ನೇ ಸಾಲಿನ ಪ್ರಥಮಾ 1, 2 ಮತ್ತು 3ನೇ ತರಗತಿಗಳ ಪಠ್ಯಪುಸ್ತಕಗಳ ರಚನಾ ಸಮಿತಿ**

| ಕ್ರ.ಸಂ. | ಹೆಸರು ಮತ್ತು ವಿಳಾಸ | ಅಧ್ಯಕ್ಷರು/ಸದಸ್ಯರು |
|---|---|---|
| 01 | **ವಿದ್ವಾನ್ ಹನುಮಂತರಾಯಪ್ಪ**<br>ಪ್ರಶಾಸನ ಸಮಿತಿ ಸದಸ್ಯರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ<br>ಬೆಂಗಳೂರು–18 | ಅಧ್ಯಕ್ಷರು |
| 02 | **ವಿದ್ವಾನ್ ಬಿ.ಎಸ್. ಸಿದ್ಧರಾಮಯ್ಯ**<br>ಬಾಪೂಜಿ ಸಂಸ್ಕೃತ ಪಾಠಶಾಲೆ, ಶಾರದಾದೇವಿನಗರ, ತುಮಕೂರು | ಸದಸ್ಯರು |
| 03 | **ವಿದ್ವಾನ್ ಕೃಷ್ಣಮೂರ್ತಿ**<br>ಶ್ರೀ ಕಾಲಭೈರವೇಶ್ವರ ವೇದ ಆಗಮ ಸಂಸ್ಕೃತ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ,<br>ನಾಗಮಂಗಲ ತಾ॥, ಮಂಡ್ಯ ಜಿಲ್ಲೆ | ಸದಸ್ಯರು |
| 04 | **ವಿದುಷೀ ಎಸ್.ಆರ್. ಸರಸ್ವತಮ್ಮ**<br>ಸಂಸ್ಕೃತ ಪಾಠಶಾಲೆ, ಉತ್ತರ ಬಡಾವಣೆ, ಹಾಸನ | ಸದಸ್ಯರು |
| 05 | **ವಿದ್ವಾನ್ ವೆಂಕಟೇಶ**<br>ಶ್ರೀಮಾತಾ ಸಂಸ್ಕೃತ ಕಾಲೇಜು, ಕೋಟೆಮನೆ, ಉಮ್ಮಚಗಿ, ಯಲ್ಲಾಪುರ–581 347<br>ಉತ್ತರ ಕನ್ನಡ ಜಿಲ್ಲೆ | ಸದಸ್ಯರು |

| | | |
|---|---|---|
| 06 | **ವಿದುಷೀ ಡಾ. ನಾಗರತ್ನ ಹೆಗಡೆ**<br>ಪ್ರಾಧ್ಯಾಪಕರು, ಸುರಾನ ಪದವಿ ಕಾಲೇಜು ಬೆಂಗಳೂರು | ಪರಿಶೀಲಕರು |
| 07 | **ವಿದ್ವಾನ್ ಟಿ.ಸಿ. ಅಶ್ವತ್ಥಕುಮಾರ್**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ<br>ಚಾಮರಾಜಪೇಟೆ, ಬೆಂಗಳೂರು–560 018 | ಸದಸ್ಯರು ಹಾಗೂ ಸಂಚಾಲಕರು |

**2012–13 ನೇ ಸಾಲಿನ ಕಾವ್ಯ 1, 2 ಮತ್ತು 3ನೇ ತರಗತಿಗಳ ಪಠ್ಯಪುಸ್ತಕಗಳ ರಚನಾ ಸಮಿತಿ**

| ಕ್ರ.ಸಂ. | **ಹೆಸರು ಮತ್ತು ವಿಳಾಸ** | **ಅಧ್ಯಕ್ಷರು/ಸದಸ್ಯರು** |
|---|---|---|
| 01 | **ವಿದ್ವಾನ್ ಡಿ.ಎಸ್ ಚಂದ್ರಶೇಖರಯ್ಯ**<br>ಪ್ರಾಚಾರ್ಯರು, ಶ್ರೀ ಸಿದ್ಧಗಂಗಾ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು | ಅಧ್ಯಕ್ಷರು |
| 02 | **ವಿದ್ವಾನ್ ಸುಬ್ಬರಾಯ ವಿ. ಭಟ್ಟ**<br>ಶ್ರೀ ಶಂಕರಭಾರತಿ ಸಂಸ್ಕೃತ ಪಾಠಶಾಲೆ, ಸೋಮೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ | ಸದಸ್ಯರು |
| 03 | **ವಿದ್ವಾನ್ ಎನ್.ಆರ್. ಮುರಳೀಧರ**<br>ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570 024 | ಸದಸ್ಯರು |
| 04 | **ವಿದ್ವಾನ್ ಗಣಪತಿ ಭಟ್**<br>ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು,<br>ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾ॥, ಉ.ಕ. ಜಿಲ್ಲೆ | ಸದಸ್ಯರು |
| 05 | **ವಿದ್ವಾನ್ ಶಿವಮೂರ್ತೆಪ್ಪ ನಾ. ಶಿಂಪಿಗೇರ**<br>ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಗದಗ | ಸದಸ್ಯರು |
| 06 | **ವಿದ್ವಾನ್ ನಾಗೇಶ**<br>ಶ್ರೀಮಾತಾ ಸಂಸ್ಕೃತ ಕಾಲೇಜು, ಕೋಟೆಮನೆ, ಉಮ್ಮಚಗಿ, ಯಲ್ಲಾಪುರ–581 347, ಉ.ಕ. ಜಿಲ್ಲೆ | ಸದಸ್ಯರು |
| 07 | **ವಿದ್ವಾನ್ ಎಂ.ಆರ್. ವೆಂಕಟೇಶಮೂರ್ತಿ**<br>ಕರ್ನಾಟಕ ವಿದ್ಯಾಸಾಂಸ್ಕೃತಿಕ ಸಂಘ, ನಾಗಪ್ಪ ಬೀದಿ, ಬೆಂಗಳೂರು | ಸದಸ್ಯರು |
| 08 | **ವಿದ್ವಾನ್ ಎನ್.ಎ. ಗೋಪಾಲಕೃಷ್ಣಭಟ್ಟ**<br>ಶ್ರೀ ತರಳಬಾಳು ಜಗದ್ಗುರು ಸಂಸ್ಕೃತ ಪಾಠಶಾಲೆ, ಸಿರಿಗೆರೆ, ಚಿತ್ರದುರ್ಗ ತಾಲ್ಲೂಕು | ಸದಸ್ಯರು |
| 09 | **ವಿದ್ವಾನ್ ರಾಮಕೃಷ್ಣ**<br>ಶ್ರೀ ಸಿದ್ಧಗಂಗಾ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು | ಸದಸ್ಯರು |
| 10 | **ವಿದ್ವಾನ್ ಮಧುಸೂದನ್ ಅಡಿಗ**<br>ಶ್ರೀ ಕಾಲಭೈರವೇಶ್ವರ ವೇದ ಆಗಮ ಸಂಸ್ಕೃತ ಕಾಲೇಜು, ಶ್ರೀ<br>ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ | ಪರಿಶೀಲಕರು |
| 11 | **ವಿದ್ವಾನ್ ಗಂಗಾಧರ ವಿ. ಭಟ್ಟ**<br>ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570 024 | ಪರಿಶೀಲಕರು |
| 12 | **ವಿದ್ವಾನ್ ಟಿ.ಸಿ. ಅಶ್ವತ್ಥಕುಮಾರ್**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಚಾಮರಾಜಪೇಟೆ, ಬೆಂಗಳೂರು–560 018 | ಸದಸ್ಯರು ಹಾಗೂ ಸಂಚಾಲಕರು |

**2012–13 ನೇ ಸಾಲಿನ ಸಾಹಿತ್ಯ 1 ಮತ್ತು 2ನೇ ತರಗತಿಗಳ ಪಠ್ಯಪುಸ್ತಕಗಳ ರಚನಾ ಸಮಿತಿ**

| ಕ್ರ.ಸಂ. | **ಹೆಸರು ಮತ್ತು ವಿಳಾಸ** | **ಅಧ್ಯಕ್ಷರು/ಸದಸ್ಯರು** |
|---|---|---|
| 01 | **ವಿದ್ವಾನ್ ಡಾ. ಎಚ್.ಆರ್. ವಿಶ್ವಾಸ್**<br>ಸಂಸ್ಕೃತ ಭಾರತಿ ಸಂಘ ನಿಕೇತನ, ಪ್ರತಾಪನಗರ, ಮಣ್ಣುಗುಡ್ಡ<br>ಮಂಗಳೂರು–575 003 | ಅಧ್ಯಕ್ಷರು |
| 02 | **ವಿದ್ವಾನ್ ಎ. ಹರಿದಾಸ ಭಟ್ಟ**<br>ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ, ಬೆಂಗಳೂರು | ಸದಸ್ಯರು |
| 03 | **ವಿದ್ವಾನ್ ಡಾ. ತಿರುಮಲ ಕುಲಕರ್ಣಿ**<br>ಪ್ರಾಧ್ಯಾಪಕರು, ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪೆ, ಬೆಂಗಳೂರು | ಸದಸ್ಯರು |
| 04 | **ವಿದ್ವಾನ್ ಡಾ. ಕೃಷ್ಣಮೂರ್ತಿ ಎಸ್. ಬಾಯರಿ**<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು | ಸದಸ್ಯರು |
| 05 | **ವಿದ್ವಾನ್ ಶ್ರೀಕಾಂತ್ ಪುರೋಹಿತ್**<br>ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು<br>ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ | ಸದಸ್ಯರು |

| | | |
|---|---|---|
| 06 | **ವಿದುಷೀ ಎಂ. ವಿಜಯಲಕ್ಷ್ಮೀ**<br>ಭಾರತೀಯ ಸಂಸ್ಕೃತಿ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ಚಾಮರಾಜಪೇಟೆ ಬೆಂಗಳೂರು | ಸದಸ್ಯರು |
| 07 | **ವಿದ್ವಾನ್ ಲಕ್ಷ್ಮೀಕಾಂತ ಮೊಹರೆ,** ಇಂಚಲ | ಸದಸ್ಯರು |
| 08 | **ವಿದ್ವಾನ್ ಡಾ. ಪ್ರಭುಲಿಂಗ ಹೆಬ್ಬಾಳ್**<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು | ಸದಸ್ಯರು |
| 09 | **ವಿದ್ವಾನ್ ಜಿ.ಸಿ. ರಾಜಶೇಖರಯ್ಯ**<br>ಸಿದ್ಧಗಂಗಾ ಸಂಸ್ಕೃತ ವೇದ–ಆಗಮ ಕಾಲೇಜು, ಸಿದ್ಧಗಂಗಾಮಠ, ತುಮಕೂರು | ಸದಸ್ಯರು |
| 10 | **ವಿದ್ವಾನ್ ಉದಯಭಟ್ಟ**<br>ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570 024 | ಸದಸ್ಯರು |
| 11 | **ವಿದ್ವಾನ್ ಎ.ಎಂ. ಚಂದ್ರಶೇಖರಯ್ಯ**<br>ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570 024 | ಸದಸ್ಯರು |
| 12 | **ವಿದ್ವಾನ್ ಬಿ.ಎಲ್. ಮಂಜುನಾಥ್**<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಚಾಮರಾಜಪೇಟೆ, ಬೆಂಗಳೂರು | ಸದಸ್ಯರು |
| 13 | **ವಿದ್ವಾನ್ ಎಸ್. ರೇಣುಕಾರಾಧ್ಯ**<br>ಶ್ರೀ ಸಿದ್ಧಗಂಗಾ ವೇದ ಮತ್ತು ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು | ಸದಸ್ಯರು |
| 14 | **ಡಾ. ಎನ್. ಲಕ್ಷ್ಮೀನಾರಾಯಣ ಭಟ್ಟ**<br>ಶ್ರೀಮನ್ಮಧ್ವಸಿದ್ಧಾಂತ ಪ್ರಭೋಧಿನೀ ಸಂಸ್ಕೃತ ಕಾಲೇಜು ಉಡುಪಿ | ಪರಿಶೀಲಕರು |
| 15 | **ಡಾ. ಹೆಚ್.ಕೆ. ಸುರೇಶ್**<br>ಪ್ರಾಚಾರ್ಯರು–ಶ್ರೀಮನ್ಮಧ್ವಸಿದ್ಧಾಂತ ಪ್ರಭೋಧಿನೀ ಸಂಸ್ಕೃತ ಕಾಲೇಜು, ಉಡುಪಿ | ಸದಸ್ಯ ಸಂಚಾಲಕರು ಹಾಗೂ ಪರಿಶೀಲಕರು |

**ನಿರ್ಣಯ:** **ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 14: 2012–2013ನೇ ಸಾಲಿನ ಸಂಸ್ಕೃತ ಪಾಠಶಾಲೆಗಳ ರಾಜ್ಯಮಟ್ಟದ ಸ್ಪರ್ಧೆಗಳ ಸಂಸ್ಕೃತ ಕಂಠಪಾಠ, ಭಾಷಣ ಮತ್ತು ಅಂತ್ಯಾಕ್ಷರೀ ಮುಂತಾದ ಸ್ಪರ್ಧೆಗಳನ್ನು ಆಯೋಜಿಸುವ ಬಗೆಗೆ.**

**ಟಿಪ್ಪಣಿ:** ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷವೂ ಸಂಸ್ಕೃತ ಕಂಠಪಾಠ, ಭಾಷಣ ಮತ್ತು ಅಂತ್ಯಾಕ್ಷರೀ ಇತ್ಯಾದಿ ಸ್ಪರ್ಧೆಗಳನ್ನು ವಲಯಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಆಯೋಜಿಸಲಾಗುತ್ತಿದ್ದು, ಈ ಸಂಬಂಧ 2012 ನವೆಂಬರ್ ತಿಂಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಸುಮಾರು 5 ಲಕ್ಷ ರೂ.ಗಳನ್ನು ಅಂದಾಜಿಸಿದೆ. ಈ ವಿಷಯದ ಒಪ್ಪಿಗಾಗಿ ಮಂಡಿಸಿದೆ.

**ನಿರ್ಣಯ:** **ಸಭೆಯು ಕಾರ್ಯಕ್ರಮವು ವ್ಯವಸ್ಥಿತವಾಗಿ ನಡೆಯಬೇಕೆಂದು ಸೂಚಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 15: 2012–13ನೇ ಸಾಲಿನ ಸಂಸ್ಕೃತ ಕಾಲೇಜುಗಳ ರಾಜ್ಯಮಟ್ಟದ ಸ್ಪರ್ಧೆಗಳ ಆಯೋಜನೆ ಬಗೆಗೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯದ ಸಂಸ್ಕೃತ ಕಾಲೇಜುಗಳಲ್ಲಿ ವಿವಿಧ ಶಾಸ್ತ್ರ ಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿವಿಧ ಶಾಸ್ತ್ರಗಳ ಭಾಷಣ–ಶಲಾಕಾ, ಅಂತ್ಯಾಕ್ಷರೀ ಇವೇ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದ್ದು, ಪ್ರಸಕ್ತ 2012ನೇ ಸಾಲಿನ ರಾಜ್ಯಮಟ್ಟದ ಸಂಸ್ಕೃತ ಭಾಷಣ–ಶಲಾಕಾ ಸ್ಪರ್ಧೆಗಳನ್ನು ನವೆಂಬರ್ ತಿಂಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಈ ಸ್ಪರ್ಧೆಗಳ ಆಯೋಜನೆಗೆ ಸಂಬಂಧಿಸಿದಂತೆ 5 ಲಕ್ಷ ರೂ.ಗಳನ್ನು ಅಂದಾಜಿಸಿದೆ. ಈ ವಿಷಯದ ಒಪ್ಪಿಗೆಗಾಗಿ ಸಭೆಯ ಅವಗಾಹನೆಗೆ ಮಂಡಿಸಿದೆ.

**ನಿರ್ಣಯ:** **ಸಭೆಯು ಸ್ಪರ್ಧೆಗಳ ಆಯೋಜನೆ ವ್ಯವಸ್ಥಿತವಾಗಿ ನಡೆಯಬೇಕೆಂದು ಸೂಚಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 16: ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದ ವಿದ್ಯಾ ಪ್ರತಿಷ್ಠಾನವು ನಡೆಸುವ ವೇದಭೂಷಣ ಮತ್ತು ವೇದವಿಭೂಷಣ ಪರೀಕ್ಷೆಗಳನ್ನು ವೇದ ಪ್ರವೇಶ ಮತ್ತು ವೇದ ಮೂಲ/ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳಿಗೆ ಸಮಾನವಾಗಿ ಪರಿಗಣಿಸುವ ಬಗೆಗೆ.**

**ಟಿಪ್ಪಣಿ:** ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಿಂದ ಮಾನ್ಯತೆ ಪಡೆದ ಉಜ್ಜೈನಿ ನಗರದ ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದವಿದ್ಯಾ ಪ್ರತಿಷ್ಠಾನ – ಈ ಕೇಂದ್ರವು ನಡೆಸುವ ವೇದಭೂಷಣ ಮತ್ತು ವೇದವಿಭೂಷಣ ಪರೀಕ್ಷೆಗಳನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ವೇದ ಪ್ರವೇಶ ಮತ್ತು ವೇದ ಮೂಲ/ಕಾವ್ಯ ಮತ್ತು ಸಾಹಿತ್ಯ

ಪರೀಕ್ಷೆಗಳಿಗೆ ಸಮಾನವಾಗಿ ಪರಿಗಣಿಸುವಂತೆ ಮನವಿಯನ್ನು ನೀಡಿರುತ್ತಾರೆ. ಈ ವಿಷಯದ ಒಪ್ಪಿಗೆಗಾಗಿ ಪ್ರಶಿಕ್ಷಣ ಪರಿಷತ್ತಿನ ಸಭೆಗೆ ಮಂಡಿಸಿದೆ.

ನಿರ್ಣಯ: **ಸಭೆಯು ಇದರ ಶೈಕ್ಷಣಿಕ ಉಪಯುಕ್ತತೆಯನ್ನು ಗಮನಿಸಿ ಪರೀಕ್ಷಾ ಸಮಾನತೆಗೆ ಅನುಮೋದನೆಯನ್ನು ನೀಡಿತು.**

**ವಿಷಯ 17: ವಲಯ ಸಂಯೋಜಕರ ಹಾಗೂ ವಿಷಯ ಪರಿವೀಕ್ಷಕರ ಘಟನೋತ್ತರ ಅನುಮೋದನೆಯ ಬಗೆಗೆ.**

**ಟಿಪ್ಪಣಿ:** ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ರಾಜ್ಯದ ಸಂಸ್ಕೃತ ಪಾಠಶಾಲೆಗಳ ಶೈಕ್ಷಣಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಹಾಗೂ ಪಾಠಶಾಲೆಗಳ ಸುಲಭ ಸಂಪರ್ಕಕ್ಕಾಗಿ ಸಮಗ್ರ ಸಂಸ್ಕೃತ ಪಾಠಶಾಲೆಗಳನ್ನು ವಲಯವಾರು ವಿಂಗಡಿಸಿ ಆರು ವಲಯಗಳನ್ನಾಗಿ ಗುರುತಿಸಿದೆ. ಈ ಹಿನ್ನೆಲೆಯಲ್ಲಿ ಪಾಠಶಾಲೆಗಳ ಕಾರ್ಯವೈಖರಿಗಳನ್ನು ಗಮನಿಸುವ ಉದ್ದೇಶದಿಂದ ವಲಯಕ್ಕೆ ಒಬ್ಬರಂತೆ 6 ಜನ ವಲಯ ಸಂಯೋಜಕರನ್ನು ಹಾಗೂ 6 ಜನ ವಿಷಯ ಪರಿವೀಕ್ಷಕರನ್ನು ನೇಮಿಸಿ ಆದೇಶ ಹೊರಡಿಸಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ವಿಷಯ ಪರಿವೀಕ್ಷಕರು ಹಾಗೂ ವಲಯ ಸಂಯೋಜಕರ ವಿವರ**

| ಕ್ರ.ಸಂ. | ವಲಯ | ವಲಯ ಸಂಯೋಜಕರ ಹೆಸರು | ವಿಷಯ ಪರಿವೀಕ್ಷಕರ ಹೆಸರು |
|---|---|---|---|
| 01. | ಬೆಂಗಳೂರು | ವಿದ್ವಾನ್ ಸಿ.ಎನ್. ಚಂದ್ರಶೇಖರಯ್ಯ, ಬೆಂಗಳೂರು | ವಿದ್ವಾನ್ ಎಚ್.ಎಸ್. ವಿಜಯ್, ಬೆಂಗಳೂರು |
| 02. | ಚಿತ್ರದುರ್ಗ | ವಿದ್ವಾನ್ ಸಿ.ಜೆ. ಶಂಕರೇಗೌಡ, ಚಿತ್ರದುರ್ಗ | ವಿದ್ವಾನ್ ಬಿ.ಆರ್. ಗಂಗಾಧರನ್ ತುಮಕೂರು |
| 03. | ಮೈಸೂರು | ವಿದ್ವಾನ್ ಎಂ. ಶಿವಮೂರ್ತಿ, ಮೈಸೂರು | ವಿದುಷೀ ಸಾವಿತ್ರಿ ಪೂಜಾರಿ, ಕೆ.ಆರ್. ನಗರ |
| 04. | ಧಾರವಾಡ | ವಿದ್ವಾನ್ ಘಟ್ನಟ್ಟಿ, ಧಾರವಾಡ | ವಿದ್ವಾನ್ ರಾಮಚಂದ್ರ ತಿಮ್ಮಪ್ಪ ಭಟ್, ಶಿರಸಿ |
| 05. | ಬೆಳಗಾವಿ | ವಿದ್ವಾನ್ ಎಸ್.ಡಿ. ಕರಾಡೆ, ಬೆಳಗಾವಿ | ವಿದ್ವಾನ್ ಬಿ.ಎಸ್. ಬಾಸೂರ, ಹುನಗುಂದ |
| 06. | ಗುಲ್ಬರ್ಗಾ | ವಿದ್ವಾನ್ ಶಂಭುಲಿಂಗಪ್ಪ ಎಸ್. ಬಾಬ್ಜಿ, ಗುಲ್ಬರ್ಗಾ | ಡಾ. ಹನುಮಂತ ಎಸ್. ಜೋಶಿ, ಗುಲ್ಬರ್ಗಾ |

ನಿರ್ಣಯ: **ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 18: ಜ್ಯೋತಿಷ್ಯಶಾಸ್ತ್ರ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ತರಗತಿಗೆ ಪಠ್ಯವಿಷಯ ಹಾಗೂ ಪ್ರವೇಶ ನಿಯಮಾವಳಿ ಸೇರಿದಂತೆ ಸಿದ್ಧಪಡಿಸಿದ ಪರಿನಿಯಮವನ್ನು ಒಪ್ಪಿಸುವ ಬಗೆಗೆ.**

**ಟಿಪ್ಪಣಿ:** ಪ್ರಶಾಸನ ಸಮಿತಿಯ ನಿರ್ಣಯದಂತೆ ದಿನಾಂಕ 27.07.2012 ರಂದು ನಡೆದ ಸಭೆಯಲ್ಲಿ ಜ್ಯೋತಿಷ್ಯಶಾಸ್ತ್ರ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ತರಗತಿಗೆ ಪಠ್ಯವಿಷಯ ಹಾಗೂ ಪ್ರವೇಶ ನಿಯಮಾವಳಿ ಸೇರಿದಂತೆ ಪರಿನಿಯಮ ಒಂದನ್ನು ರಚಿಸಲು, ಮಾನ್ಯ ಡೀನರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ಪರಿನಿಯಮಗಳನ್ನು ಹಾಗೂ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು, ಪ್ರಶಿಕ್ಷಣ ಸಭೆಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವರಗಳನ್ನು ಕೇಳಿತು. ಸರ್ಕಾರಕ್ಕೆ ಸೂಕ್ತ ರೀತಿಯಿಂದ ಪ್ರಸ್ತಾವನೆ ಕಳುಹಿಸಲು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 19: ಇಂಡಿಯಾ ರಿಸಲ್ಟ್ ಡಾಟ್ ಕಾಮ್ ಈ ಸಂಸ್ಥೆಯ ಜಾಲತಾಣದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಫಲಿತಾಂಶಗಳ ಪ್ರಕಟಣೆಯ ಬಗೆಗೆ.**

**ಟಿಪ್ಪಣಿ:** ಇಂಡಿಯಾ ರಿಸಲ್ಟ್ ಡಾಟ್ ಕಾಮ್ ಎಂಬ ಸಂಸ್ಥೆಯು ಈಗಾಗಲೇ ರಾಜ್ಯದ ಹಲವು ವಿಶ್ವವಿದ್ಯಾಲಯಗಳ ಜೊತೆಗೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಒಪ್ಪಂದವನ್ನು ಮಾಡಿಕೊಂಡಿದ್ದು, ನಾನಾ ವಿಶ್ವವಿದ್ಯಾಲಯಗಳು ನಡೆಸುವ ಪರೀಕ್ಷೆಗಳ ಫಲಿತಾಂಶಗಳನ್ನು ಉಚಿತವಾಗಿ ತನ್ನ ಜಾಲತಾಣದಲ್ಲಿ ಪ್ರಕಟಿಸುತ್ತಾ ಬಂದಿದೆ. ಅದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸುವ ವಿದ್ವತ್ ಪರೀಕ್ಷೆಗಳು ಹಾಗೂ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಪರೀಕ್ಷೆಗಳ ಫಲಿತಾಂಶಗಳನ್ನು ಉಚಿತವಾಗಿ ತನ್ನ ಜಾಲತಾಣದಲ್ಲಿ ಪ್ರಕಟಿಸಲು ಒಡಂಬಡಿಕೆಯನ್ನು ಮಾಡಿಕೊಳ್ಳಲು ಪತ್ರದ ಮುಖಾಂತರ ಕೋರಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸೂಕ್ತ ರೀತಿಯಿಂದ ಕಾರ್ಯನಿರ್ವಹಿಸಲು ಸೂಚಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ:20 2013–14ನೇ ಸಾಲಿನಿಂದ ಆರಂಭಿಸಲು ತೀರ್ಮಾನಿಸಿರುವ ಸಂಸ್ಕೃತ ಅನೌಪಚಾರಿಕ ತರಗತಿಗಳನ್ನು ಆರಂಭಿಸಲು ಸಿದ್ಧಪಡಿಸಿದ ಪರಿನಿಯಮವನ್ನು ಒಪ್ಪಿಸುವ ಬಗೆಗೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರಾಜ್ಯದ IGNOU/KSOU ಮಾದರಿಯಲ್ಲಿ ಎಲ್ಲಾ ಸಂಸ್ಕೃತಾಭಿಮಾನಿಗಳಿಗೆ ಲಭ್ಯವಾಗುವಂತೆ ದೂರ–ಬಾಹ್ಯ–ಮುಕ್ತ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳನ್ನು 2013–14ನೇ ಸಾಲಿನಿಂದ ಆರಂಭಿಸಲು ಉದ್ದೇಶಿಸಿದೆ. ಈ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೂರಶಿಕ್ಷಣ ಪರಿನಿಯಮಗಳನ್ನು ಸಿದ್ಧಪಡಿಸಿ, ಸಭೆಯ ಅವಗಾಹನೆಗಾಗಿ ಒಪ್ಪಿಸಿದೆ.

ನಿರ್ಣಯ: **ಸಭೆಯು ಅನೌಪಚಾರಿಕ ಶಿಕ್ಷಣದ ಪರಿನಿಯಮವನ್ನು ಪರಿಶೀಲಿಸಿ ಸರ್ಕಾರಕ್ಕೆ ಕೂಡಲೇ ಸಲ್ಲಿಸಬೇಕೆಂದು ಸೂಚಿಸಿತು. 2013–14ನೇ ಸಾಲಿನಲ್ಲಿ ಪ್ರಾರಂಭಿಸಬೇಕೆಂದು ಅಭಿಪ್ರಾಯಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 21: ದಿನಾಂಕ: 28.09.2012ರ ಉನ್ನತ ಶಿಕ್ಷಣ ಸಚಿವರ ಟಿಪ್ಪಣಿಗೆ ಮಾಹಿತಿ ನೀಡುವ ಬಗೆಗೆ.**

**ಟಿಪ್ಪಣಿ:** ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಬರೆದ (ಟಿಪ್ಪಣಿ ಸಂಖ್ಯೆ: ಉಶಿಸ/497/2012; ದಿನಾಂಕ: 28.09.2012) ಪತ್ರದಲ್ಲಿ– ಹೊಸ ವಿಭಾಗಗಳನ್ನು ಸ್ಥಾಪಿಸುವಾಗ ಆಯಾ ಪ್ರಾದೇಶಿಕ ಅಂಶಗಳನ್ನು ಮತ್ತು ಕಾಲೇಜುಗಳಲ್ಲಿ ಇರುವ ವಿಭಾಗಗಳನ್ನು ಪರಿಗಣಿಸುವುದು, ಹೊಸ ವಿಭಾಗಗಳನ್ನು ಸಮೀಕ್ಷೆ ಮಾಡಿ ತೆರೆಯಲು ಕ್ರಮಕೈಗೊಳ್ಳುವುದು, ಈಗಾಗಲೇ ಪ್ರಾರಂಭಿಸಿರುವ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಬೋಧಕರನ್ನು ಗಮನಿಸಿ ವಿಭಾಗ ಪ್ರಾರಂಭಿಸುವುದು, ಸೂಕ್ತ ಕಾರ್ಯಭಾರ ಇಲ್ಲದ ಸಿಬ್ಬಂದಿಗಳನ್ನು ಬೇರೆ ವಿಭಾಗಗಳಿಗೆ ವರ್ಗಾಯಿಸುವುದು, ಕನಿಷ್ಠ ವಿದ್ಯಾರ್ಥಿಗಳು ಇಲ್ಲದ ವಿಭಾಗಗಳನ್ನು ಹೊಸದಾಗಿ ತೆರೆಯತಕ್ಕದ್ದಲ್ಲ, ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣ ಮಾಡುವಾಗ ನೆಲಮಹಡಿ ಮೇಲೆ 3 ಅಂತಸ್ತಿನ ಕಟ್ಟಡ ನಿರ್ಮಿಸಲು ಕ್ರಮವಹಿಸುವ ಬಗ್ಗೆ ನಮೂನೆಯಲ್ಲಿ ಇರುವ ಮಾಹಿತಿಯನ್ನು ಶಿಕ್ಷಣ ಸಚಿವರಿಗೆ ಸಲ್ಲಿಸಲು ಸೂಚಿಸಿರುತ್ತಾರೆ. ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯು ಮಾನ್ಯ ಸಚಿವರ ಅಭಿಪ್ರಾಯವನ್ನು ತಿಳಿಯಿತು. ವಿಶ್ವವಿದ್ಯಾಲಯವು ಈವರೆಗೂ ಸ್ವತಂತ್ರವಾಗಿ ವಿಭಾಗಗಳು ಕಾರ್ಯ ಪ್ರಾರಂಭಿಸಿಲ್ಲವಾಗಿ ತನ್ನ ವ್ಯಾಪ್ತಿಗೆ ವಿಷಯ ನೇರವಾಗಿ ಬರುವುದಿಲ್ಲವೆಂದು ಅಭಿಪ್ರಾಯಿಸಿ ತನ್ನ ಅನುಮೋದನೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು